# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406,
ಮೈಸೂರು-570 005.


ವಿಷಯ: IPGRS ತಂತ್ರಾಂಶದಲ್ಲಿ ದಾಖಲಾದ ಕುಂದುಕೊರತೆ/ಮನವಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದನ್ನು ಮೇಲ್ವಿಚಾರಣೆ ಮಾಡಲು ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿಯನ್ನು (Public Grievance Management Officer-PGMO) ನೇಮಕಾತಿ ಮಾಡುವುದರ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 29 ಪಿಆರ್ವ 2020 ಬೆಂಗಳೂರು ದಿನಾಂಕ:09-08-2021

2. ಸರ್ಕಾರದ ಅಧೀನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ-2 ಮತ್ತು ಸಾಮಾನ್ಯ-2) ಇವರ ಪತ್ರ ಸಂಖ್ಯೆ:ಇಡಿ 61 ವಿವಿಧ 2023 ದಿನಾಂಕ:18-01-2024.

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಇವರ ಸುತ್ತೋಲೆ ಸಂಖ್ಯೆ :ಸಿಆಸುಇ 118 ಪಿಆರ್‌ಜೆ 2023 ದಿನಾಂಕ:09-11-2023.

4. ಮಾನ್ಯ ಕುಲಪತಿರವರ ಅನುಮೋದನೆ ದಿನಾಂಕ:18.04.2024.

*****

**ಪ್ರಸ್ತಾವನೆ:**

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 29 ಪಿಆರ್‌ಜೆ 2020, ದಿನಾಂಕ: 09-08-2021. ರಲ್ಲಿ ಪ್ರತಿಯೊಂದು ಸರ್ಕಾರಿ ಕಛೇರಿಗಳಲ್ಲಿ ಐ.ಪಿ.ಜಿ.ಆರ್.ಎಸ್‌ನಲ್ಲಿ ಸ್ವೀಕರಿಸಲಾಗುವ ಸಾರ್ವಜನಿಕ ಕುಂದುಕೊರತೆ/ಮನವಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದನ್ನು ಖಾತ್ರಿಪಡಿಸಿಕೊಳ್ಳಲು ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿ (Public Grievance Management Officer-PGMO) ಯನ್ನು ನೇಮಿಸಿ, ಅವರ ವಿವರಗಳನ್ನು ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ಜಾಲತಾಣದಲ್ಲಿ ಪ್ರಕಟಿಸುವಂತೆ ಮತ್ತು ಪ್ರತಿದಿನವೂ ಸಂಬಂಧಪಟ್ಟ ಕಛೇರಿಗಳಲ್ಲಿ ಸ್ವೀಕರಿಸಿದ ವಿಲೇಯಾದ ಹಾಗೂ ಬಾಕಿ ಇರುವ ಸಾರ್ವಜನಿಕ ದೂರುಗಳ ಅಂಕಿ-ಅಂಶಗಳನ್ನು ಪ್ರಕಟಿಸುವಂತೆ ಆದೇಶಿಸಲಾಗಿದೆ.

ಸರ್ಕಾರದ ನಿರ್ದೇಶನದ ಅನ್ವಯ ವಿಶ್ವವಿದ್ಯಾನಿಲಯದಲ್ಲಿ **ಐ.ಪಿ.ಜಿ.ಆರ್.ಎಸ್‌ನಲ್ಲಿ** ಸ್ವೀಕರಿಸಲಾಗುವ ಸಾರ್ವಜನಿಕ ಕುಂದುಕೊರತೆ/ಮನವಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದನ್ನು ಖಾತ್ರಿಪಡಿಸಿಕೊಳ್ಳಲು ಗ್ರೂಪ್-ಬಿ ದರ್ಜೆಯ ಹುದ್ದೆಗಿಂತ ಕಡಿಮೆ ಇಲ್ಲದ ಅಧಿಕಾರಿಗಳನ್ನು ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿಯಾಗಿ (Public Grievance Management Officer-PGMO) ನೇಮಿಸುವಂತೆ ಹಾಗೂ ಈ ರೀತಿಯಾಗಿ ನೇಮಕವಾದಂತಹ ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿ (Public Grievance Management Officer-PGMO)ಗಳು ವರ್ಗಾವಣೆ, ಮುಂಬಡ್ತಿ ಅಥವಾ ವಯೋನಿವೃತ್ತಿ ಹೊಂದಿದಾಗ ಸದರಿ ಜಾಗಕ್ಕೆ ನೇಮಕವಾದ ಅಧಿಕಾರಿಗಳೇ ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿ (Public Grievance Management Officer-PGMO)ಗಳಾಗುತ್ತಾರೆ ಮತ್ತು ಅಧಿಕಾರಿಗಳು ಬದಲಾವಣೆಯಾದ ಮಾಹಿತಿಯನ್ನು ಜಾಲತಾಣದಲ್ಲಿ ಪ್ರದರ್ಶಿಸುವುದು ಹಾಗೂ ಯೋಜನಾ ನಿರ್ದೇಶಕರು ಐ.ಪಿ.ಜಿ.ಆರ್.ಎಸ್ ಇ-ಆಡಳಿತ ಕೇಂದ್ರಕ್ಕೂ ಮಾಹಿತಿ ನೀಡುವಂತೆ ತಿಳಿಸಿರುತ್ತಾರೆ.

ಅದರಂತೆ, ವಿಶ್ವವಿದ್ಯಾನಿಲಯದ ಐ.ಪಿ.ಜಿ.ಆರ್.ಎಸ್‌ನಲ್ಲಿ ಸ್ವೀಕರಿಸಲಾಗುವ ಸಾರ್ವಜನಿಕ ಕುಂದುಕೊರತೆ / ಮನವಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದನ್ನು ಖಾತ್ರಿಪಡಿಸಿಕೊಳ್ಳಲು

ಪು.ತಿ.ನೋ....

ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿಯನ್ನು (Public Grievance Management Officer-PGMO) ನೇಮಿಸಲು ಮಾನ್ಯ ಕುಲಪತಿಗಳು ಆದೇಶಿಸಿರುತ್ತಾರೆ ಅದರಂತೆ ಈ ಕೆಳಕಂಡ ಆದೇಶ;

**ಆದೇಶ ಸಂಖ್ಯೆ ಇಟಿ13/129ಎ/2022-23, ದಿನಾಂಕ 18ನೇ ಏಪ್ರಿಲ್ 2024.**

ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ, ಶ್ರೀ ದಿನೇಶ್ ಆರ್ ಸಹಾಯಕ ಕುಲಸಚಿವ(ಸಿಬ್ಬಂದಿ) ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು **"IPGRS ತಂತ್ರಾಂಶದ"** ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿಯನ್ನಾಗಿ (Public Grievance Management Officer-PGMO) ಈ ತಕ್ಷಣದಿಂದ ಜಾರಿಗೆ ಬಂದಂತೆ ನೇಮಕ ಮಾಡಲಾಗಿದೆ.

ಆದೇಶದ ಮೇರೆಗೆ

ಕುಲಸಚಿವ

ಇವರಿಗೆ:

ಶ್ರೀ ದಿನೇಶ್ ಆರ್
ಸಹಾಯಕ ಕುಲಸಚಿವ(ಸಿಬ್ಬಂದಿ)
ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು.

ಪ್ರತಿ:

1. ನಿರ್ದೇಶಕರು, ಐ.ಪಿ,ಜಿ.ಆರ್.ಎಸ್, ಇ-ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ,ಬೆಂಗಳೂರು.
2. ಸಂಯೋಜನಾಧಿಕಾರಿ, ಐ.ಸಿ.ಡಿ ವಿಭಾಗ,ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ,ಮೈಸೂರು. **(ಸದರಿ ತಂತ್ರಾಂಶದ ಮಾಹಿತಿಯನ್ನು ಹಾಗು ಸದರಿ ನೇಮಕಾತಿಯನ್ನು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಪ್ರದರ್ಶಿಸುವುದು)**
3. ಹಣಕಾಸು ಅಧಿಕಾರಿಗಳು,ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು.
4. ಉಪಕುಲಸಚಿವರು (ಸಾಮಾನ್ಯ)/ ಸಹಾಯಕ ಕುಲಸಚಿವ/ಅಧೀಕ್ಷಕರು(ಸಿಬ್ಬಂದಿ),ಮೈ.ವಿ.ವಿ.ನಿಲಯ, ಮೈಸೂರು.
5. ಆಪ್ತ ಸಹಾಯಕರು ಕುಲಪತಿ/ಕುಲಸಚಿವ/ಹಣಕಾಸು ಅಧಿಕಾರಿಗಳು ಮೈ.ವಿ.ವಿ ಮೈಸೂರು-05.
6. ಕಛೇರಿ ಪ್ರತಿ.